1	2	3	4
23	Mysore	40374	331259
24	Raichur	48059	145750
25	Shimoga	32973	187420
26	Tumkur	42797	366128
27	Udupi	14567	74212
28	Uttara Kannada	13685	177889
	Grand Total	**950000**	**6074986**

5598(6246) : ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004–05 ಮತ್ತು 2005–06ನೇ ಸಾಲಿಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬಂದ ಒಟ್ಟು ಅನುದಾನವೆಷ್ಟು; ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಕೇಂದ್ರ ಪುರಸ್ಕೃತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳೇನು?

ಶ್ರೀಮತಿ ಭಾಗೀರಥಿ ಮುರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವಿವರ ಈ ಕೆಳಕಂಡಂತಿದೆ.

ಕೇಂದ್ರ ಸರ್ಕಾರದ ಸ್ವಾವಲಂಬನೆ (ನೋರಾಡ್ ಯೋಜನೆಯಡಿ ಬಂದಿರುವ ಅನುದಾನದ ವಿವರ:

2004–05ನೇ ಸಾಲಿನಲ್ಲಿ ರೂ. 17.50 ಲಕ್ಷ ಮತ್ತು

2005–06ನೇ ಸಾಲಿನಲ್ಲಿ ರೂ. 03.26 ಲಕ್ಷ ಅನುದಾನ ಬಂದಿದ್ದು, ಸದರಿ ಮೊತ್ತವನ್ನು ಪೂರ್ಣವಾಗಿ ಯೋಜನೆ ಅನುಷ್ಠಾನಗೊಳಿಸುವ ಸಂಬಂಧಪಟ್ಟ ತರಬೇತಿ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರದ ಸ್ವೆಪ್ ಯೋಜನೆಯಡಿ ನಿಗಮಕ್ಕೆ ಅನುದಾನ ಬಿಡುಗಡೆಯಾಗುತ್ತಿರುವುದಿಲ್ಲ. ಆದರೆ ನೇರವಾಗಿ ಕೇಂದ್ರ ಸರ್ಕಾರವೇ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುತ್ತಿದ್ದು. 2004–05 ಮತ್ತು 2005–06ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾದ ಬಗ್ಗೆ ಈ ವರದಿ/ಮಾಹಿತಿ ಬಂದಿರುವುದಿಲ್ಲ.

ಸ್ವಶಕ್ತಿ ಯೋಜನೆಗೆ ಕೇಂದ್ರ ಸರ್ಕಾರದಿಂದ 2004–05ನೇ ಸಾಲಿನಲ್ಲಿ ರೂ. 200.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಪ್ರಾರಂಭದಲ್ಲಿ ಸೇರಿದಂತೆ ರೂ. 3,63,94,510–00 ಗಳು ಖರ್ಚಾಗಿರುತ್ತದೆ. 2005–06ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅನುಷ್ಠಾನಗೊಳಿಸುವ ಕೇಂದ್ರ ಪುರಸ್ಕೃತ ಯೋಜನೆಗಳು ಈ ಕೆಳಕಂಡಂತಿವೆ:

1. ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆ.
2. ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ.
3. ಉದೀಷಾ–ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಯೋಜನೆ.
4. ಮಾದರಿ ಅಂಗನವಾಡಿ ಕಟ್ಟಡಗಳ ನಿರ್ಮಾಣ.
5. ಕಿಶೋರಿ ಶಕ್ತಿ ಯೋಜನೆ.
6. ಬಾಲಿಕಾ ಸಮೃದ್ಧಿ ಯೋಜನೆ.
7. ಎ ಪ್ರೋಗ್ರಾಂ ಫಾರ್ ಜುವೆನೈಲ್ ಜಸ್ಟಿಸ್.
8. ಸ್ವಯಂಸಿದ್ಧ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಅನುಷ್ಠಾನ ಮಾಡುವ ಕೇಂದ್ರ ಪುರಸ್ಕೃತ ಮಹಿಳಾ ಕಲ್ಯಾಣ ಯೋಜನೆಗಳು ಈ ಕೆಳಕಾಣಿಸಿದಂತಿದೆ.

(1) **ಸ್ವಾವಲಂಬನೆ (ನೋರಾಡ್) ಯೋಜನೆ :** ಈ ಯೋಜನೆಯಡಿ ಕೇಂದ್ರ ಸರ್ಕಾರ ಗುರುತಿಸಿರುವ 36 ಚಟುವಟಿಕೆಗಳಲ್ಲಿ ಅರ್ಹ ಮಹಿಳೆಯರಿಗೆ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳ ಮೂಲಕ ವಿವಿಧ ಚಟುವಟಿಕೆಗಳಲ್ಲಿ ತರಬೇತಿ ನೀಡಲು ಅನುದಾನ ನೀಡುವ ಯೋಜನೆ.

(2) **ಸ್ವೆಪ್ ಯೋಜನೆ :** ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ, ಕೈಮಗ್ಗ, ಕರಕುಶಲ ಮುಂತಾದ ಕ್ಷೇತ್ರಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ತರಬೇತಿ ಮತ್ತು ಉತ್ಪಾದನಾ ಘಟಕ ಸ್ಥಾಪಿಸುವುದು ಸರ್ಕಾರಿ/ಸರ್ಕಾರೇತರ ಸಂಸ್ಥೆಗಳ, ಸಾರ್ವಜನಿಕ ಉದ್ದಿಮೆಗಳ ಮೂಲಕ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು.

(3) **ಸ್ವಶಕ್ತಿ ಯೋಜನೆ :** ಇದು ವಿಶ್ವಬ್ಯಾಂಕ್ ಆರ್ಥಿಕ ನೆರವಿನ ಯೋಜನೆ, ರಾಜ್ಯದ ಏಳು ಜಿಲ್ಲೆಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಅತಿ ಬಡತನದಲ್ಲಿರುವ ಮಹಿಳೆಯರನ್ನು ಸಂಘಟಿಸಿ ಸ್ವಶಕ್ತರನ್ನಾಗಿಸುವ ಯೋಜನೆಯಾಗಿದೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ – 6246ರ

ಅನುಬಂಧ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬಂದ ಒಟ್ಟು ಅನುದಾನ ಹಾಗೂ ಬಳಸಿಕೊಳ್ಳಲಾದ ಪ್ರಮಾಣದ ವಿವರ

(ರೂ. ಲಕ್ಷಗಳಲ್ಲಿ)

ಕಾರ್ಯಕ್ರಮಗಳು	2004–05ರಲ್ಲಿ ಬಿಡುಗಡೆಯಾದ ಅನುದಾನ		2005–06 (ಮೇ ಅಂತ್ಯದ ವರೆಗೆ)	
	ಅನುದಾನ	ವೆಚ್ಚ	ಅನುದಾನ	ವೆಚ್ಚ
1) ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆ	11023.50	12280.15	5653.46	2270.36
2) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ	1992.76	1882.59	ಅನುಷ್ಠಾನದಲ್ಲಿರುವುದಿಲ್ಲ	

3) ಉದಿಷಾ–ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಯೋಜನೆ	280.00	246.63	100.00	29.13
4) ಮಾದರಿ ಅಂಗನವಾಡಿ ಕಟ್ಟಡಗಳ ನಿರ್ಮಾಣ	500.00	500.00	–	–
5) ಕಿಶೋರಿಶಕ್ತಿ ಯೋಜನೆ *	–	20.81	–	–
6) ಬಾಲಿಕಾ ಸಮೃದ್ಧಿ ಯೋಜನೆ **	490.36	–	–	45.00
7) ಎ ಪ್ರೋಗ್ರಾಂ ಫಾರ್ ಜುವೆನೈಲ್ ಜಸ್ಟೀಸ್	50.31	72.62	–	13.80
8) ಸ್ವಯಂ ಸಿದ್ಧ ***	25.22	70.59	50.00	–

* ಈ ಯೋಜನೆಗೆ ಪ್ರತ್ಯೇಕ ಅನುದಾನ ಬಿಡುಗಡೆಯಾಗಿರುವುದಿಲ್ಲ. ಕ್ರಮ ಸಂಖ್ಯೆ(1) ಅನುದಾನದಲ್ಲಿ ಖರ್ಚನ್ನು ಭರಿಸಲಾಗುತ್ತಿದೆ.

** 2004–05ನೇ ಸಾಲಿನ ವರ್ಷ್ಯಾಂತ್ಯದಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿದ್ದು ಇದನ್ನು 2005–06ನೇ ಸಾಲಿನಲ್ಲಿ ಖರ್ಚು ಮಾಡಲಾಗುತ್ತಿದೆ.

*** ಅನುದಾನ ರಾಜ್ಯ ಸರ್ಕಾರದಿಂದ ಬಿಡುಗಡೆ ಹಂತದಲ್ಲಿದೆ.

5599(6537) : ಶ್ರೀ ನಾಗರಾಜಯ್ಯ ಡಿ. (ಹುಲಿಯೂರ್ ದುರ್ಗ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರಾಟ ಇಲಾಖೆಯು ಪ್ರಾರಂಭವಾದಾಗಿನಿಂದ ಬೆರಳಚ್ಚುಗಾರರಿಗೆ ಪದೋನ್ನತಿ ನೀಡಲಾಗಿದೆಯೇ?

ಆ) ನೀಡಿದ್ದಲ್ಲಿ ವಿವರಗಳೇನು?

ಇ) ಪ್ರಸ್ತುತ ಪದೋನ್ನತಿ ನೀಡದೆ ವಂಚಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ ನೌಕರರಿಗೆ ಅನ್ಯಾಯವಾಗುವುದಿಲ್ಲವೇ?

ಈ) ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕಾರಿ ಆದೇಶದ ಪ್ರಕಾರ ಎಲ್ಲಾ ವೃಂದದ ಸಿಬ್ಬಂದಿಗಳಿಗೂ ಪದೋನ್ನತಿಯನ್ನು ನೀಡುತ್ತಿರುವಾಗ ಬಂದಿರುವ ದೂರುಗಳ ಆಧಾರದ ಮೇಲೆ ಕೇವಲ ಬೆರಳಚ್ಚುಗಾರರ ಪದೋನ್ನತಿಯನ್ನು ಮಾತ್ರ ತಡೆಹಿಡಿಯಬೇಕೆಂದು ಸರ್ಕಾರವು ತಮ್ಮ ಪತ್ರ ಸಂಖ್ಯೆ: ಸಸಿ:49:ಮಾಇಸೇ: 2005 ದಿನಾಂಕ: 1/7/2005ರಲ್ಲಿ ಸೂಚಿಸಿರುವುದು ನಿಜವೇ? ಇವರ ಪದೋನ್ನತಿಯು ಮಾತ್ರ ಕಾನೂನು ಬಾಹಿರ ಹೇಗಾಗುತ್ತದೆ?

ಉ) ಕೃಷಿ ಮಾರಾಟ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆರಳಚ್ಚುಗಾರರಿಗೆ ಕಾರ್ಯಕಾರಿ ಆದೇಶದಲ್ಲಿ ಪ್ರಥಮ ದರ್ಜೆ ಸಹಾಯಕರಿಗೆ ನಿಗದಿಪಡಿಸಿರುವ ಎಲ್ಲಾ ಅರ್ಹತೆ ಇದ್ದರೂ ಸಹ ಪ್ರಥಮ ದರ್ಜೆ ಸಹಾಯಕರ ಪದೋನ್ನತಿಗೆ ಇವರನ್ನು ಪರಿಗಣಿಸದಿರಲು ಕಾರಣಗಳೇನು?